# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-5046/2013/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 28/8/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಟಿ.ಪುಟ್ಟಯ್ಯ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಜಿ.ರಾಜಪ್ಪ ಬಿನ್ ದಾಸಪ್ಪರ ಗಿರಿಯಪ್ಪ, ನಂ.26, 1ನೇ ಕ್ರಾಸ್, ಗವೀಪುರಂ ಎಕ್ಸ್‌ಟೆನ್ಷನ್, ಬೆಂಗಳೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಟಿ.ಪುಟ್ಟಯ್ಯ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದೊಡ್ಡತೇಕಲವಟ್ಟಿ ಹೊಸದುರ್ಗ ತಾಲ್ಲೂಕಿನಲ್ಲಿ ರೈತರ ಕೃಷಿ ಸಾಲ ಮನ್ನಾದಲ್ಲಿ ಅವ್ಯವಹಾರ ನಡೆದಿರುತ್ತದೆ. ಸಂಘದ ಕಾರ್ಯದರ್ಶಿ ಶ್ರೀ.ಡಿ.ಟಿ.ವಟ್ಟಿ ಇವರು ಹೇಳುವ ಹಾಗೆ ಸರ್ಕಾರದಿಂದ ಸಹಕಾರ ಸಂಘಕ್ಕೆ ನೀಡಲಾದ ಹಣದಲ್ಲಿ ಒಟ್ಟು ಎಲ್ಲಾ 221 ರೈತರಿಗೆ ಒಟ್ಟು ರೂ.35 ಲಕ್ಷ ಮನ್ನಾ ಆಗಿದೆಯೆಂದು ಹೇಳುತ್ತಿದ್ದಾರೆ. ಆದರೆ, ಅವರೇ ಕೈಬರಹದಲ್ಲಿ ನೀಡಿರುವ ಮಾಹಿತಿ ಪಟ್ಟಿಯಲ್ಲಿ ಎಲ್ಲಾ 221 ರೈತರಿಗೆ ಸುಮಾರು ರೂ.42 ಲಕ್ಷ ಮನ್ನಾ ಆಗಿರುವುದು ಕಾಣಿಸುತ್ತದೆ. ಮೇಲ್ವಿಚಾರಕರು, ಚಿತ್ರದುರ್ಗ ಜಿಲ್ಲಾ ಸಹಕಾರ ಬ್ಯಾಂಕ್, ಹೊಸದುರ್ಗ ಶಾಖೆ ಇವರು ಹೇಳುವ ಹಾಗೆ ಚಿತ್ರದುರ್ಗ ಜಿಲ್ಲಾ ಸಹಕಾರ ಬ್ಯಾಂಕ್‌ನಿಂದ 2011-12ನೇ ಸಾಲಿನಲ್ಲಿ ರೂ.49,70,000/-ಗಳನ್ನು ಒಟ್ಟು 277 ರೈತರಿಗೆ ನೀಡಲಾಗಿದೆ. ಕಾರ್ಯದರ್ಶಿಗಳು ಹಾಗೂ ಮೇಲ್ವಿಚಾರಕರು ಇವರ ಹೇಳಿಕೆಯಲ್ಲಿ ಸುಮಾರು 56 ರೈತರ ಹೆಸರುಗಳು ಸಿಗುತ್ತಿಲ್ಲ. ಆದ್ದರಿಂದ, ಈ ಬಗ್ಗೆ ಸೂಕ್ತ ತನಿಖೆಯನ್ನು ಕೈಗೊಂಡು ಅವ್ಯವಹಾರವನ್ನು ಬಹಿರಂಗಪಡಿಸಬೇಕೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪ ವಿಭಾಗ, ಇವರಿಗೆ ಆದೇಶಿಸಲಾಗಿತ್ತು. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪ ವಿಭಾಗ ಇವರು ವರದಿಯನ್ನು ಸಲ್ಲಿಸಿದ್ದು, ಅವರು ತನ್ನ ವರದಿಯಲ್ಲಿ ದೂರುದಾರರ ದೂರಿನ ಬಗ್ಗೆ ಸಂಘದ ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿದಾಗ, ಸಂಘದ ಮುಖ್ಯ ಕಾರ್ಯನಿರ್ವಾಹಕರು ಈ ಹಿಂದೆ ಅರ್ಜಿದಾರರಿಗೆ ಅಪೂರ್ಣ ಹಾಗೂ ಅಸಮರ್ಪಕ ಮಾಹಿತಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ, ಸದರಿ ಅಂಶಗಳು ಅನುಮಾನಕ್ಕೆ ಆಸ್ಪದ ನೀಡಿರುತ್ತವೆ. ಆದಕಾರಣ, ಪ್ರಸ್ತುತ ಅರ್ಜಿದಾರರು ಸೂಚಿಸಿರುವ ಅಂಶಗಳನ್ನು ಸಂಘದ ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ಅವುಗಳ ನಕಲು ಪ್ರತಿಗಳನ್ನು ವಿವರವಾದ ಷರಾದೊಂದಿಗೆ ಮಾಹಿತಿ ನೀಡಲಾಗಿದೆ. 2011-12ನೇ ಸಾಲಿನಲ್ಲಿ ಸದರಿ ಸಂಘದಿಂದ 277 ರೈತ ಸದಸ್ಯರ ಕೃಷಿ ಅಲ್ಪಾವಧಿ ಸಾಲ ರೂ.48,41,627/- ಅಸಲು ಹಾಗೂ ರೂ.6,08,990/- ಸರ್ಕಾರದಿಂದ ಮನ್ನಾ ಆಗಿರುವುದು ದೃಢಪಟ್ಟಿರುತ್ತದೆ. ಸಂಘವು ಸರ್ಕಾರಕ್ಕೆ ಸಲ್ಲಿಸಿರುವ ಸಾಲ ಮನ್ನಾ ಬಿಲ್ಲುಗಳ ಪ್ರತಿಗಳು ಹಾಗೂ ಸಾಲ ಮನ್ನಾ ಸವಲತ್ತು ಪಡೆದ ರೈತರ ಸಹಿ ಮತ್ತು ಫೋಟೋವುಳ್ಳ ಪ್ರಮಾಣ ಪತ್ರಗಳನ್ನು ಅನುಬಂಧಗಳಲ್ಲಿ ಲಗತ್ತಿಸಲಾಗಿದೆ. ಸದರಿ ವಿವರ ಅನುಸಾರ ದೂರು ಅರ್ಜಿಯಲ್ಲಿನ ಅಂಶಗಳು ಮೇಲ್ನೋಟಕ್ಕೆ ದೃಢಪಟ್ಟಿರುವುದಿಲ್ಲವೆಂದು ಹೇಳಿರುತ್ತಾರೆ.

4) ಸಹಕಾರ ಸಂಘಗಳ ಸಹಾಯಕ ನಿಬಂಧಕರ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ವರದಿಯನ್ನು ಅಲ್ಲಗಳೆದಿರುತ್ತಾರೆ. ಲೆಕ್ಕ ಪರಿಶೋಧನಾ ವರದಿಯನ್ನು ನೋಡಲಾಗಿ ವರದಿ ದಿ.1/4/12 ರಿಂದ ದಿ.31/3/13 ರವರೆಗೆ ಆಗಿರುವ ವರದಿಯಾಗಿರುತ್ತದೆ. ಆದರೆ, ಕೃಷಿ ಸಾಲದ ಹಣ ದುರುಪಯೋಗವಾಗಿರುವುದು ಜುಲೈ 2011 ರಿಂದ ಆಗಸ್ಟ್ 2012 ರವರೆಗೆ ಅಂದರೆ ರೈತರ ಕೃಷಿ ಸಾಲ ಮನ್ನಾದ ಹಣ ದುರುಪಯೋಗ ಹಾಗೂ ಅವ್ಯವಹಾರವನ್ನು ಸಂಪೂರ್ಣವಾಗಿ ವರದಿಯಿಂದ ದೂರ ಇಡಲಾಗಿದೆ. ಸರ್ಕಾರದ ಆದೇಶದ ಪ್ರಕಾರ ಸಾಲ ಮನ್ನಾ ಆಗಿರುವ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಬಿಟ್ಟು ಉಳಿದ ಮಾಹಿತಿಗಳನ್ನು ಮಾತ್ರ ವರದಿಯಲ್ಲಿ ತಿಳಿಸಲಾಗಿದೆ. ಆದ್ದರಿಂದ, ಸಹಕಾರ ಸಂಘದಲ್ಲಿ ಹಲವಾರು ರೈತರಿಗೆ ಮೋಸವಾಗಿದೆಯೆಂದು ಹೇಳಿರುತ್ತಾರೆ.

5) ದೂರುದಾರರ ಪ್ರತ್ಯುತ್ತರದ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಂಘದ ಲೆಕ್ಕ ಪರಿಶೋಧನೆಯು ಪ್ರತಿ ವರ್ಷ ನಡೆಯುತ್ತಿದ್ದು, 2011-12ನೇ ಸಾಲಿಗೆ ಪ್ರತ್ಯೇಕ ವರದಿಯನ್ನು ಲೆಕ್ಕ ಪರಿಶೋಧನಾ ಇಲಾಖೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಅಂತೆಯೇ 2012-13ನೇ ಸಾಲಿಗೂ ಲೆಕ್ಕ ಪರಿಶೋಧನೆ ಕೈಗೊಂಡು ಆಯಾ ವರ್ಷಗಳಿಗೆ ಸಂಬಂಧಿಸಿದಂತೆ ಹಾಜರು ಪಡಿಸಿದ ದಾಖಲೆಗಳನ್ವಯ ಲೆಕ್ಕ ಪರಿಶೋಧನಾ ವರದಿ ಬಿಡುಗಡೆಯಾಗಿರುತ್ತದೆ. ಲೆಕ್ಕ ಪರಿಶೋಧನಾ ವರದಿ 2012-13ನೇ ಸಾಲಿಗೆ ಸಂಬಂಧಿಸಿದ್ದು, ಅಂದರೆ ದಿ.1/4/12 ರಿಂದ 31/3/13 ರವರೆಗಿನ

ವ್ಯವಹಾರ ಮತ್ತು ಸಾಲ ಮನ್ನಾ ವಿವರಗಳ ವರದಿಯ ಕಂಡಿಕೆ 43 ರ ಉಪ ಕಂಡಿಕೆಯಲ್ಲಿ ವಿವರಿಸಲಾಗಿದೆ. ಕಂಡಿಕೆ ಸಂ.5 ರಿಂದ 19 ರವರೆಗೆ ಅರ್ಜಿದಾರರು ಕೋರಿದ ಮಾಹಿತಿಯು ಲೆಕ್ಕ ಪರಿಶೋಧನಾ ಇಲಾಖೆಯಿಂದ ಸಹಕಾರ ಸಂಘಗಳಲ್ಲಿ ಗುರುತಿಸುವ ಸಾಮಾನ್ಯ ನ್ಯೂನತೆಗಳಾಗಿದ್ದು, ಕಾರ್ಯ ನಿರ್ವಹಿಸುತ್ತಿರುವ ಬಹುತೇಕ ಸಹಕಾರ ಸಂಘಗಳಲ್ಲಿ ಸದರಿಯವರು ಕೋರಿರುವ ಆಡಳಿತಾತ್ಮಕ, ಆರ್ಥಿಕ ಹಾಗೂ ಲೆಕ್ಕಪತ್ರಗಳ ನಿರ್ವಹಣೆಯಲ್ಲಿನ ದೋಷಗಳೇ ಆಗಿರುತ್ತವೆ. ಅಲ್ಲದೆ ಯಾವುದೇ ಹಣಕಾಸು ದುರುಪಯೋಗದ ಬಗ್ಗೆ ಇರುವುದಿಲ್ಲ. ದೂರಿನಲ್ಲಿ ಆಪಾದಿಸಿರುವಂತೆ ಯಾವುದೇ ಸದಸ್ಯರಿಗೆ ಮೋಸವಾಗಿರುವುದಿಲ್ಲ. ಆಗಸ್ಟ್ 2011 ರಲ್ಲಿ ವಿತರಿಸಲಾದ ಸಾಲಗಾರರ ಮನ್ನಾ ದೃಢೀಕರಣದ ಬಿಲ್ಲು ಮತ್ತು ಸಾಲ ಮನ್ನಾ ಆಗಿರುವ ಬಗ್ಗೆ ಸಾಲಗಾರರಿಂದ ಪಡೆದ ದೃಢೀಕರಣ ಪತ್ರಗಳನ್ನು ಸಲ್ಲಿಸಲಾಗಿರುತ್ತದೆ. ವಿ.ರಾಮಲಿಂಗಪ್ಪ ಇವರು ದಿ.30/1/12 ರಂದು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದು, ಸಕಾಲಕ್ಕೆ ದಾಖಲೆಗಳನ್ನು ಒದಗಿಸದ ಕಾರಣ ಅವರ ಅರ್ಜಿ ತಿರಸ್ಕೃತಗೊಂಡಿದೆ. ರಾಮಲಿಂಗಪ್ಪ ರವರಿಗಾಗಲೀ ಅಥವಾ ಅವರ ಪತ್ನಿ ಶಾರದಮ್ಮ ಇವರಿಗಾಗಲೀ ಯಾವುದೇ ರೀತಿಯ ಸಾಲವನ್ನು ಸಂಘದಿಂದ ವಿತರಣೆ ಮಾಡಿರುವುದಿಲ್ಲ.

6) ದೂರುದಾರರ ದೂರು, ಪ್ರತ್ಯುತ್ತರ ಮತ್ತು ಎದುರುದಾರರ ಆಕ್ಷೇಪಣೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವರದಿಯ ಆಧಾರದಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಆಗದೇ ಇದ್ದ ಕಾರಣ ಈ ಪ್ರಕರಣದ ತನಿಖೆಯನ್ನು ನಡೆಸಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

i. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ ಹೊಸದುರ್ಗ ತಾಲ್ಲೂಕು ಇಲ್ಲಿ ದಾಖಲಾತಿ ಪ್ರಕಾರ ಮನ್ನಾ ಆದ ರೈತರ ಸಂಖ್ಯೆ 277 ಆಗಿರುವುದು ವಿಚಾರಣೆಯಿಂದ ಹಾಗೂ ದಾಖಲಾತಿಗಳನ್ನು ಪರಿಶೀಲನೆಯಿಂದ ತಿಳಿದುಬಂದಿರುತ್ತದೆ. ಆದರೆ, ಶ್ರೀ.ಜಿ.ರಾಜಪ್ಪ ಇವರು ಪಡೆದ ಮಾಹಿತಿಯಲ್ಲಿ 221 ಜನ ರೈತರ ಪಟ್ಟಿಯನ್ನು ಕಾರ್ಯದರ್ಶಿ ರವರು ನೀಡಿದ್ದು ಇನ್ನುಳಿದ 56 ಜನರ ಪಟ್ಟಿ ಕೊಟ್ಟಿರುವುದಿಲ್ಲ ಈ 56 ಜನ ರೈತರು ಸಾಲ ಮನ್ನಾ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂತ ಅರ್ಜಿದಾರ ರಾಜಪ್ಪ ಸಂಶಯ ವ್ಯಕ್ತಪಡಿಸಿದ್ದು, ಈ ಬಗ್ಗೆ ಮುಂದುವರೆದು ಕಾರ್ಯದರ್ಶಿ ಶ್ರೀ.ಪುಟ್ಟಯ್ಯ ಇನ್ನುಳಿದ 56 ಜನರ ಸಾಲ ಮನ್ನಾ ನಂತರದಲ್ಲಿ ಆಗಿದ್ದರ ಬಗ್ಗೆ ಪಟ್ಟಿ ಪೂರೈಸಿದ್ದು, ಒಟ್ಟು 277 ಜನ ರೈತರ ಸಾಲ ಮನ್ನಾ ಮ್ಯಾನೇಜರ್ ಸಿ.ಡಿ.ಸಿ.ಸಿ. ಬ್ಯಾಂಕ್ ನಿಯಮಿತ ಹೊಸದುರ್ಗ ರವರ ಪತ್ರದಿಂದ ತಿಳಿದುಬಂದಿರುತ್ತದೆ.

ii. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ ಇಲ್ಲಿ ಸಾಲ ಪಡೆದ ರೈತರಲ್ಲಿ ವಿಚಾರ ಮಾಡಲಾಗಿ ರೈತರ ಸಾಲ ಸರ್ಕಾರದ ಆದೇಶದಂತೆ ರೂ.25,000/- ಒಳಗಿನ ಸಾಲ ಮನ್ನಾ ಆಗಿದ್ದು, ಸಾಲ ಮನ್ನಾ ಆದ ನಂತರ ಪುನಃ ರೈತರುಗಳ ಸಾಲವನ್ನು ಪಡೆದಿರುವುದು ವಿಚಾರಣೆಯಿಂದ ಹಾಗೂ ದಾಖಲಾತಿಗಳ ಪರಿಶೀಲನೆಯಿಂದ ತಿಳಿದುಬಂದಿರುತ್ತದೆ.

iii. ದೊಡ್ಡತೇಕಲವಟ್ಟಿ ವಾಸಿಗಳಾದ ರಾಮಲಿಂಗಯ್ಯ ಮತ್ತು ಶಾರದಮ್ಮ ಇವರುಗಳು ಜಮೀನಿನ ಬಾಬ್ತು ಪಡೆದ ಸಾಲದ ವಿಚಾರವಾಗಿ ತಹಶೀಲ್ದಾರ್, ಹೊಸದುರ್ಗ ಮತ್ತು ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ ಹಾಗೂ ಮೇಲ್ವಿಚಾರಕರು, ಸಿ.ಡಿ.ಸಿ.ಸಿ. ಬ್ಯಾಂಕ್ ಹೊಸದುರ್ಗ ರವರನ್ನು ವಿಚಾರ ಮಾಡಲಾಗಿ ಸತ್ಯಾಂಶ ಈ ಕೆಳಗಿನಂತಿರುತ್ತದೆ.

ಸದರಿ ರಾಮಲಿಂಗಯ್ಯ ಮತ್ತು ಶ್ರೀಮತಿ.ಶಾರದಮ್ಮ ಎಂಬುವರು ಶ್ರೀ.ಟಿ.ಪುಟ್ಟಯ್ಯ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ದೊಡ್ಡತೇಕಲವಟ್ಟಿ ರವರಿಗೆ ಸಾಲಕ್ಕೆ ಮನವಿ ಮಾಡಿಕೊಂಡು ಪೂರ್ವ ಮಂಜೂರಾತಿಗಾಗಿ ಪದ್ಧತಿಯಂತೆ ತಮ್ಮ ಜಮೀನುಗಳ ಪಹಣಿ, ಪ್ರತಿಜ್ಞಾ ಲೇಖ ಮಾಡಿಸಿಕೊಂಡು ಬಂದು ನೀಡಿದ್ದು, ಸಾಲವಾಗಿ ಹೆಚ್ಚಿನ ಮೊತ್ತವನ್ನು ಕಾರ್ಯದರ್ಶಿಯವರಿಂದ ಕೇಳಿದ್ದು, ಸಹಕಾರಿ ಸಂಘದ ನಿಯಮದಂತೆ ಬೆಳೆ ಸಾಲಕ್ಕೆ ಕೊಡುವ ಮೊತ್ತವು ಕಡಿಮೆಯಾಗಿದ್ದರಿಂದ, ರಾಮಲಿಂಗಯ್ಯ ಮತ್ತು ಶಾರದಮ್ಮ ರವರು ನಮಗೆ ಸಹಕಾರಿ ಸಂಘದ ಸಾಲ ಬೇಡವೆಂದು ಕಾರ್ಯದರ್ಶಿಯವರಿಗೆ ಹೇಳಿದ್ದರಿಂದ, ಈ ಮಧ್ಯೆ ಶ್ರೀ.ರಾಮಲಿಂಗಯ್ಯ ಮತ್ತು ಶ್ರೀಮತಿ.ಶಾರದಮ್ಮ ರವರು ಬರೆದುಕೊಟ್ಟ ಪ್ರತಿಜ್ಞಾ ಲೇಖದ ಮೇರೆಗೆ ಮೇಲ್ಕಂಡ ಜಮೀನುಗಳ ಋಣಭಾರಗಳ ಪಹಣಿಗಳಲ್ಲಿ ನಮೂದು ಆಗಿರುತ್ತದೆ. ರಾಮಲಿಂಗಯ್ಯ ಮತ್ತು ಶಾರದಮ್ಮರವರಿಗೆ ಯಾವುದೇ ಸಾಲ ಪ್ರಾ.ಕೃ.ಪ.ಸಹಕಾರ ಸಂಘದಿಂದ ಬಿಡುಗಡೆಯಾಗಿರುವುದಿಲ್ಲ.

ನಂತರ ಟಿ.ಪುಟ್ಟಯ್ಯ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ ರವರ ಲಿಖಿತ ಪತ್ರದ ಮೇರೆಗೆ ಋಣಭಾರವನ್ನು ರಾಮಲಿಂಗಯ್ಯ ಮತ್ತು ಶಾರದಮ್ಮ ರವರ ಪಹಣಿಗಳಿಂದ ತೆಗೆದು ಹಾಕಿರುತ್ತದೆ. ಆದರೆ, ರಾಮಲಿಂಗಯ್ಯ ಮತ್ತು ಶಾರದಮ್ಮ ರವರು ಸದರಿ ವರ್ಷದ ಪಹಣಿಯಲ್ಲಿ ಸಾಲ ನಮೂದು ಇದ್ದ ಕಾರಣದಿಂದ ಅವರ ಸಾಲವು ಸಹ ಮನ್ನಾ ಆಗಿದೆ ಅವರ ಸಾಲವನ್ನು ಟಿ.ಪುಟ್ಟಯ್ಯ, ಕಾರ್ಯದರ್ಶಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ರವರು ಬಳಸಿಕೊಂಡಿರಬಹುದು ಎಂದು ಸಂಶಯ ಹೊಂದಿರುತ್ತಾರೆ. ಅರ್ಜಿದಾರ ರಾಜಪ್ಪರವರು ಸಹ ಇದೇ ರೀತಿ ಸಂಶಯವನ್ನು ವ್ಯಕ್ತಪಡಿಸಿರುತ್ತಾರೆ. ರಾಮಲಿಂಗಯ್ಯ ಮತ್ತು ಶಾರದಮ್ಮ ರವರ ಸಾಲದ ಹಣ, ಸಾಲ ಮನ್ನಾ ವಿಚಾರದಲ್ಲಿ ಕಾರ್ಯದರ್ಶಿ ಟಿ.ಪುಟ್ಟಯ್ಯ ರವರು ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂಬ ಅಂಶವು ಸತ್ಯಾಂಶದಿಂದ ಕೂಡಿರುವುದಿಲ್ಲ ಎಂದು ವಿಚಾರಣೆಯಿಂದ ಮತ್ತು ಸಂಗ್ರಹಿಸಿದ ದಾಖಲಾತಿಗಳಿಂದ ತಿಳಿದು ಬಂದಿರುತ್ತದೆ.

iv. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ದೊಡ್ಡತೇಕಲವಟ್ಟಿ ಹೊಸದುರ್ಗ ತಾಲ್ಲೂಕು ರವರು ಸಹಕಾರ ಸಂಘದಲ್ಲಿ ರೈತರ ಹೆಸರು, ತಂದೆಯ ಹೆಸರು, ವಿಳಾಸ, ಸರ್ವೆ ನಂಬರ್‌ಗಳ ಬಗ್ಗೆ ಕೂಲಂಕುಷವಾಗಿ ದಾಖಲಾತಿಗಳನ್ನು ಪರಿಶೀಲಿಸಲಾಗಿ ಬೇನಾಮಿ ರೈತರು ಕಂಡುಬಂದಿರುವುದಿಲ್ಲ ಮತ್ತು ಪ್ರಾ.ಕೃ.ಪ.ಸಹಕಾರ ಸಂಘ, ದೊಡ್ಡತೇಕಲವಟ್ಟಿ ಹೊಸದುರ್ಗ ತಾಲ್ಲೂಕು ಇಲ್ಲಿ ಹಣ ದುರುಪಯೋಗ ಆಗಿದೆ ಎಂಬುದು ಸತ್ಯಾಂಶದಿಂದ ಕೂಡಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ಹೇಳಿರುತ್ತಾರೆ.

7) ತನಿಖಾಧಿಕಾರಿಯ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎಲ್ಲಾ ರೈತರ ಜಮೀನುಗಳನ್ನು ಸಹಕಾರ ಸಂಘಕ್ಕೆ ಆಧಾರ ಮಾಡಿಲ್ಲದಿದ್ದರೂ ಸಾಲ ಮಂಜೂರಾಗಿರುತ್ತದೆ. ಕೆಲವು ರೈತರ ಜಮೀನುಗಳು ಬೇರೆ ಸಹಕಾರ ಸಂಘಕ್ಕೆ ಆಧಾರವಾಗಿದ್ದು,

ದೊಡ್ಡತೇಕಲವಟ್ಟಿ ಸಹಕಾರ ಸಂಘದಲ್ಲಿ ಹೇಗೆ ಸಾಲ ನೀಡಲಾಗಿರುತ್ತದೆ. ರಾಮಲಿಂಗಪ್ಪ ಮತ್ತು ಶಾರದಮ್ಮರವರ ಹೆಸರಿನಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಯಾವುದೇ ತನಿಖೆ ಆಗಿರುವುದಿಲ್ಲ. ಅವರುಗಳ ಹೇಳಿಕೆಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗಿದೆ. ಉಪ ನಿಬಂಧಕರು, ಚಿತ್ರದುರ್ಗ ಇವರು ನೀಡಿರುವ ವರದಿಯನ್ನು ಗಮನಿಸಿದಾಗ, ಚಿತ್ರದುರ್ಗ ಕೇಂದ್ರ ಬ್ಯಾಂಕ್‌ನವರು ನೀಡಿರುವ ಬಟವಾಡೆ ಬಿಡುಗಡೆ ಕಾಲಂನಲ್ಲಿ ಶ್ರೀ.ರಾಮಲಿಂಗಯ್ಯರವರ ಹೆಸರಿಗೆ ರೂ.23,000/- ಶಿಫಾರಸ್ಸು ಮಾಡಿ ಮತ್ತು ಹೊಡೆದು ಹಾಕಿರುತ್ತಾರೆಂದು ತಿಳಿಯುತ್ತದೆ. ಆದರೆ, ಚಿತ್ರದುರ್ಗ ಕೇಂದ್ರ ಬ್ಯಾಂಕ್‌ರವರು ನೀಡಿರುವ ಬಿಡುಗಡೆ ಕಾಲಂನಲ್ಲಿ ರಾಮಲಿಂಗಯ್ಯ ಎಂಬ ಕಾಲಂ ಹೊಡೆದು ಹಾಕಿರುವುದಿಲ್ಲ ಅಂದರೆ ಉದ್ದೇಶಪೂರ್ವಕವಾಗಿ ಹಣ ದುರುಪಯೋಗವಾಗಿರುವುದನ್ನು ಮುಚ್ಚಿಡಲಾಗಿದೆಯೆಂದು ಹೇಳಿರುತ್ತಾರೆ.

8) 2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿದಾಗ, ವರದಿಯ ಪುಟ ಸಂ.8 ರಲ್ಲಿ ಕ್ರ.ಸಂ.12(5) ಮತ್ತು (6) ರಲ್ಲಿ ಸಹಕಾರ ಸಂಘಗಳ ಕಾಯಿದೆಯನ್ವಯ ವಹಿಗಳನ್ನು ನಿರ್ವಹಿಸಿರುವುದಿಲ್ಲವೆಂದು ನಮೂದು ಕಂಡುಬರುತ್ತದೆ. ಅದೇರೀತಿ ಕ್ರ.ಸಂ.17 (3) ರಲ್ಲಿ ಕೆ.ಸಿ.ಸಿ.ಸಾಲದ ಹೊಂದಾಣಿಕೆ ಲೆಕ್ಕಗಳನ್ನು ವೈಯಕ್ತಿಕ ಉಳಿತಾಯ ಖಾತೆ ಪುಸ್ತಕಗಳಿಗೆ ಪೋಸ್ಟಿಂಗ್ಸ್ ಬಾಕಿ ಹೊಂದಾಣಿಕೆ ಮಾಡಿಕೊಂಡಿರುವುದಿಲ್ಲವೆಂದು ನಮೂದು ಮಾಡಿರುವುದು ಕಂಡುಬರುತ್ತದೆ. ಕಾಲಂ 18(2) ರಲ್ಲಿ ರಾಜ್ಯ ಸರ್ಕಾರದ ಸಾಲ ಮನ್ನಾ ಯೋಜನೆಯಲ್ಲಿ ಬಡ್ಡಿ ರಿಯಾಯಿತಿ ಪಡೆದಿದ್ದು, ಸದರಿ ಸಾಲಗಳ ವಹಿಯನ್ನು ನಿರ್ವಹಿಸಿರುವುದಿಲ್ಲ, ಮಂಜೂರಾತಿ ಆದೇಶ ಮತ್ತು ಕಂತುಗಳನ್ನು ಮರು ಪಾವತಿ ಮಾಡಿರುವ ವಿವರಗಳು ಲಭ್ಯವಿರುವುದಿಲ್ಲ. ಕಾಲಂ 24 (12) ರಲ್ಲಿ ಸಂಘದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ವಹಿಯನ್ನು ಇಟ್ಟಿರುವುದಿಲ್ಲ. ವಹಿ ನಿರ್ವಹಿಸುವಂತೆ ಹಿಂದಿನ ಸಾಲುಗಳಿಂದಲೂ ಸೂಚಿಸಿದ್ದಾಗ್ಯೂ ಅದಕ್ಕೆ ಕ್ರಮ ವಹಿಸಿರುವುದಿಲ್ಲ. ಕಾಲಂ 20/1 ರಲ್ಲಿ ಸಂಘದಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವೃಂದ ಬಲ ವೇತನ ಶ್ರೇಣಿ ಮಂಜೂರು ಮಾಡಿರುವುದಿಲ್ಲವೆಂದು ವರದಿ ಕಂಡುಬರುತ್ತದೆ. ಕಾಲಂ 24 ರಲ್ಲಿ ಸದಸ್ಯರ ಶೇರು ಖಾತೆಗಳಲ್ಲಿ ಪೂರ್ಣ ಮಾಹಿತಿ ದಾಖಲಿಸಿರುವುದಿಲ್ಲ, ಬ್ಯಾಂಕಿನಲ್ಲಿರುವ ಇತರೆ ನಿಧಿಗಳನ್ನು ನಿಯಮಾನುಸಾರ ಪ್ರತ್ಯೇಕವಾಗಿ ಠೇವಣಿಕರಿಸಿರುವುದಿಲ್ಲ. ಸರ್ಕಾರದಿಂದ ಜಮಾ ಆದ ಶೇರಿಗೆ ದೃಢೀಕರಣ ಮತ್ತು ತಾಳೆ ಮಾಡಿಕೊಂಡಿರುವುದಿಲ್ಲ. ಬೈಲಾ ಮಿತಿಮೀರಿ ನಗದು ಶಿಲ್ಕು ಉಳಿಸಿಕೊಂಡಿರುವುದು ಬೈಲಾಗೆ ವಿರುದ್ಧವಾಗಿರುತ್ತದೆ. ಪಿಗ್ಮಿ ಠೇವಣಿ ಮತ್ತು ಸಾಲಗಳಿಗೆ ಕುಳುವಾರು ತಯಾರಿಸಿ ಪರಿಶೀಲನೆಗೆ ಹಾಜರು ಪಡಿಸಿರುವುದಿಲ್ಲ ಎಂದು ಲೆಕ್ಕ ಪರಿಶೋಧಕರು ತಮ್ಮ ವರದಿಯಲ್ಲಿ ನಮೂದಿಸಿರುವುದು ಕಂಡುಬರುತ್ತದೆ.

9) ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರು ಸಂಘದ ವ್ಯವಹಾರಗಳ ಬಗ್ಗೆ ಸೂಕ್ತ ರೀತಿಯಲ್ಲಿ ವಹಿಗಳನ್ನು ನಿರ್ವಹಿಸದೆ ಇರುವುದು ಅಲ್ಲದೆ ಸಂಘದ ಬೈಲಾಗೆ ವಿರುದ್ಧವಾಗಿ ನಗದು ಶಿಲ್ಕು ಉಳಿಸಿಕೊಂಡಿರುವುದು ಕಂಡುಬರುತ್ತದೆ.

10) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರು ಸಂಘದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಲ್ಲಿ ಅದನ್ನು ವಸೂಲು ಮಾಡಲು ಹಾಗೂ ಅಗತ್ಯವಿದ್ದಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

29.8.17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.